ವಿಶ್ವೇಶ್ವರಯ್ಯ ಕಾಲುವೆಯ ಆಧುನೀಕರಣ

329 - ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವೇಶ್ವರಯ್ಯ ಆಧುನೀಕರಣಕ್ಕಾಗಿ ದಿನಾಂಕ 1-1-97ರಿಂದ ಸರ್ಕಾರದ ವತಿಯಿಂದ ನೀಡಿರುವ ಸಿಮೆಂಟು ಹಾಗೂ ಉಕ್ಕಿನ ಪ್ರಮಾಣವೆಷ್ಟು?

ಆ) ಆಧುನೀಕರಣದ ಕೆಲಸಕ್ಕಾಗಿ ತೊಡಗಿಸಲಾದ ಗುತ್ತಿಗೆದಾರರೆಷ್ಟು? ಅದರಲ್ಲಿ ರಾಜ್ಯದ ಹಾಗೂ ಹೊರ ರಾಜ್ಯದ ಗುತ್ತಿಗೆದಾರರೆಷ್ಟು? ಅವರ ವಿಳಾಸ ಹಾಗೂ ಅವರು ನೋಂದಾಯಿತ ಗೂತ್ತಿಗೆದಾರರೇ ಅಥವಾ ನೋಂದಾಯಿತರಲ್ಲದ ಗುತ್ತಿಗೆದಾರರೆ?

ಇ) ಕಾಮಗಾರಿಗಳನ್ನು ಪೂರ್ಣಗೊಳಿಸಿದ ಗುತ್ತಿಗೆದಾರರೆಷ್ಟು?

ಈ) ವೆಚ್ಚ ಮಾಡಲಾದ ಹಣವೆಷ್ಟು ಹಾಗೂ ಗುತ್ತಿಗೆದಾರರಿಗೆ ಪಾವತಿಸಬೇಕಾದ ಹಣವೆಷ್ಟು? (ವಿವರ ನೀಡುವುದು)

ಶ್ರೀ ಕೆ ಎನ್. ನಾಗೇಗೌಡ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) :

ಅ) ದಿನಾಂಕ 1-1-97 ರಿಂದ ದಿನಾಂಕ 30-6-97 ರವರೆಗೆ ಆಧುನೀಕರಣದ ಕಾಮಗಾರಿಗಳಿಗಾಗಿ ಉಪಯೋಗಿಸಲಾದ ಸಿಮೆಂಟು ಹಾಗೂ ಉಕ್ಕಿನ ವಿವರ ಈ ಕೆಳಕಂಡಂತಿದೆ.

1. ಸಿಮೆಂಟ್ : 619097 ಚೀಲಗಳು ಅಥವಾ 30954.85 ಮೆಟ್ರಿಕ್ ಟನ್.
2. ಉಕ್ಕು - 641.90 ಮೆಟ್ರಿಕ್ ಟನ್.

ಆ) ಆಧುನೀಕರಣದ ಕಾಮಗಾರಿಗಳಿಗಾಗಿ721 ಜನ ಗುತ್ತಿಗೆದಾರರನ್ನು ತೊಡಗಿಸಲಾಗಿದೆ. ಎಲ್ಲಾ ಗುತ್ತಿಗೆದಾರರು ಕರ್ನಾಟಕ ರಾಜ್ಯದಲ್ಲಿ ನೋಂದಣಿ ಮಾಡಿಸಿರುತ್ತಾರೆ.

ಇ) 348 ಗುತ್ತಿಗೆದಾರರು ಅವರಿಗೆ ವಹಿಸಲಾದ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿರುತ್ತಾರೆ.

ಈ) 1) ವೆಚ್ಚ ಮಾಡಲಾದ ಹಣ

I) ಆಧುನೀಕರಣ ಪ್ರಾರಂಭಗೊಂಡಂದಿನಿಂದ (79-80) ದೀರ್ಘಾವಧಿ ಕ್ಲೋಷರ್ ಸಮಯದವರೆಗೆ (20-1-97) - 96.58 ಕೋಟಿ ರೂ.ಗಳು

II) 20-1-97 ರಿಂದ 30-6-97ವರೆಗೆ - 55.50 ಕೋಟಿ ರೂ.ಗಳು

2) 1-7-97ಕ್ಕೆ ಪಾವತಿ ಮಾಡಬೇಕಾದ ಉಳಿಕೆ ಮೊಬಲಗು - 19.50 ಕೋಟಿ ರೂ.ಗಳು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ವಿಶ್ವೇಶ್ವರಯ್ಯ ಕೆನಾಲ್ ಆಧುನೀಕರಣಕ್ಕಾಗಿ ಸುಮಾರು 20-1-1997 ರಿಂದ 30-6-1997 ರವರೆಗೆ 55 ಕೋಟಿ 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದು ಹೇಳಿದ್ದಾರೆ. ಮತ್ತು ಈ ಒಂದು ಕೆಲಸಕ್ಕಾಗಿ ಸುಮಾರು ಆರು ಲಕ್ಷ ಹತ್ತೊಂಭತ್ತು ಸಾವಿರದ ತೊಂಭತ್ತೇಳು ಸಿಮೆಂಟ್ ಚೀಲ ಮತ್ತು 641 ಮಟ್ರಿಕ್ ಟನ್ ಉಕ್ಕು ಇಷ್ಟೊಂದು ಇದಕ್ಕಾಗಿ ಉಪಯೋಗಿಸಿದ್ದೇವೆ ಎಂದು ಹೇಳಿದ್ದಾರೆ. ಈಗ55 ಕೋಟಿ ರೂಪಾಯಿಗಳನ್ನು ಕೇವಲ ಆರು ತಿಂಗಳಲ್ಲಿ ತಾವು ಖರ್ಚು ಮಾಡಿದ್ದೀರಿ, ಇದಕ್ಕೆ ಬಜೆಟ್ ಪ್ರಾವಿಷನ್ ಎಷ್ಟಿತ್ತು? ತಾವು ಎಷ್ಟು ಹೆಚ್ಚಿನ ಹಣವನ್ನು ಖರ್ಚು ಮಾಡಿದ್ದೀರಿ? ಇದು ಒಂದು. ಎರಡನೆಯದು ಈ ಆರು ಲಕ್ಷ ಚೀಲ ಸಿಮೆಂಟ್ ಮತ್ತು ಆರು ನೂರ ನಲವತ್ತೊಂದು ಮೆಟ್ರಿಕ್ ಟನ್ ಸ್ಟೀಲ್ ಆರು ತಿಂಗಳ ಒಳಗಾಗಿ ಉಪಯೋಗ ಮಾಡಿದ್ದೀರಿ. ಇದನ್ನು ತಾವು 55 ಕೋಟಿ ರೂಪಾಯಿಗಳಲ್ಲಿಯೇ ತೆಗೆದು ಕೊಂಡಿರೋ ಅಥವಾ ಯಾವುದಾದರೂ ಪ್ರಾಜೆಕ್ಟ್‌ನಿಂದ ಇದನ್ನು ಡೈವರ್ಟ್ ಮಾಡಿದರೋ? ಇನ್ನು 145 ಕೋಟಿ ರೂಪಾಯಿಗಳ ಮಾಡ್ರನೈಜೇಷನ್ ಸ್ಕೀಮ್ ಇದೆ ಇದಕ್ಕೆ ಯಾವ ರೀತಿಯಾಗಿ ಹಣವನ್ನು ಕ್ರೋಢೀಕರಿಸಿದ್ದೀರಿ ಎಂದು ಹೇಳಬೇಕು.

ಶ್ರೀ ಕೆ.ಎನ್. ನಾಗೇಗೌಡ ಮಾನ್ಯ ಅಧ್ಯಕ್ಷರೇ, 55 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಲ್ಲ, ಬಜೆಟ್ ಎಷ್ಟು ಎಂದು ಕೇಳಿದ್ದಾರೆ. 1997-98ರಲ್ಲಿ ಬಜೆಟ್ ಇಟ್ಟಿದ್ದುದು 40 ಕೋಟಿ ರೂಪಾಯಿಗಳು ಇದು ಟೈಮ್ ಬೌಂಡ್ ಪ್ರೋಗ್ರಾಮ್ ಆದ್ದರಿಂದ ಎಮರ್ಜೆನ್ಸಿ ಕಾರ್ಯಕ್ರಮವಾದ್ದರಿಂದ ಅಡೀಷನಲ್ ಅಮೌಂಟ್‌ನ್ನು ಕೇಳಿಕೊಂಡು ನಾವು ಇವತ್ತಿನ ದಿವಸ ಆ ಕಾರ್ಯಕ್ರಮವನ್ನು ಮಾಡಿದ್ದೇವೆ. 1979 ರಿಂದ 1997ರವರೆಗೆ 96 ಕೋಟಿ ರೂಪಾಯಿಗಳು ಖರ್ಚಾಗಿದೆ. ಈಗ ಖರ್ಚಾಗಿರುವುದು 55 ಕೋಟಿ ರೂಪಾಯಿಗಳು 19 ಕೋಟಿ ರೂಪಾಯಿಗಳು ಬ್ಯಾಲೆನ್ಸ್ ಆಫ್ ಅಮೌಂಟ್ ಇದೆ ಎನ್ನುವುದನ್ನು ಸದನಕ್ಕೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. The revised estimate of the whole project is Rs. 245 Crores. ನಮ್ಮ ವಿಶ್ವೇಶ್ವರಯಯ್ಯ ಕೆನಾಲ್ 900 ಕಿಲೋಮೀಟರ್ ಉದ್ದ ಇರತ್ಕಂಥದ್ದು ಈ ಬ್ರಾಂಚಸ್ ಡಿಸ್ಟ್ರಿಬ್ಯೂಟರ್ಸ್ ಎಲ್ಲಾ ಸೇರಿಸಿಕೊಂಡರೆ. 900 ಕಿಲೋಮೀಟರ್‌ನಲ್ಲಿ ಸುಮಾರು 140 ಕಿಲೋ ಮೀಟರ್ ಲೈನಿಂಗ್ ಮಾಡಿದ್ದೇವೆ. ಸುಮಾರು ಸಿಲ್ಟ್ ತೆಗೆದಿದೆ. 267 ಬ್ರಿಡ್ಜ್‌ಗಳನ್ನು ತೆಗೆದುಕೊಂಡು 140 ಬ್ರಿಡ್ಜ್‌ಗಳನ್ನು ಕಂಪ್ಲೀಟ್ ಮಾಡಿ ಇನ್ನು ಸ್ವಲ್ಪ ದಿವಸದಲ್ಲಿ 267 ಬ್ರಿಡ್ಜ್‌ಗಳನ್ನು ಕಂಪ್ಲೀಟ್ ಮಾಡುತ್ತಿದ್ದೇವೆ. ಬೇರೆ ಪ್ರಾಜೆಕ್ಟ್‌ನಿಂದ ಈ ಸಿಮೆಂಟ್ ಅಂಡ್ ಸ್ಟೀಲನ್ನು ನಾವು ತೆಗೆದು ಕೊಂಡಿಲ್ಲ. ಈ ವರ್ಷದಲ್ಲಿ 1-1-97 ರಿಂದ 3-6-97 ರವರೆಗೆ ಆಗಿರುವುದು ಸುಮಾರು 3,498 ವರ್ಕ್ಸ್ including sluice, bridges and small repairs. ಈ 3,498 ಕೆಲಸಗಳಿಗೆ ಅಡಿಷನಲ್ ಗ್ರಾಂಟ್ ಕೇಳಿದ್ದೇವೆ. ಇದು ಟೈಮ್ ಬೌಂಡ್ ಪ್ರೋಗ್ರಾಮ್. ಇದನ್ನು ಎಮರ್ಜೆನ್ಸಿ ಕಾರ್ಯಕ್ರಮ ಎಂದು ಹೇಳಿ ಇಟ್ಟುಕೊಂಡಿದ್ದೇವೆ. ಆದ್ದರಿಂದ, ಸರ್ಕಾರದಿಂದ ಹಣ ಪಡೆದುಕೊಂಡು ಅವರಿಗೆ ಬಾಕಿ ಪಾವತಿ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗ 40 ಕೋಟಿ ಇಟ್ಟಿದ್ದಲ್ಲಿ ಇವರು ಆದ್ಯತೆ ಮೇರೆಗೆ ಕೆಲಸವನ್ನು ತೆಗೆದುಕೊಂಡು 55 ಕೋಟಿ ರೂಪಾಯಿಗಳಿಗೂ ಇನ್ನೂ ಹೆಚ್ಚಿಗೆ ಆಗಿರಬಹುದು. ಇಲ್ಲಿಯವರೆಗೆ ಆಗಿದ್ದು 55 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದು ಹೇಳಿದ್ದಾರೆ. ಅಂದಾಗ ಯಾವುದಾದರೂ ಪ್ರಾಜೆಕ್ಟ್‌ನಿಂದ 15 ಕೋಟಿ ರೂಪಾಯಿಗಳು ಅಥವಾ 20 ಕೋಟಿ ರೂಪಾಯಿಗಳನ್ನು ಇವರು ಟ್ರಾನ್ಸ್‌ಫರ್ ಮಾಡಲೇಬೇಕು. ಅಥವಾ ರಿಅಪ್ರೋಪ್ರಿಯೇಟ್ ಮಾಡಲೇಬೇಕು. ಅದಕ್ಕೆ ಇದನ್ನು ಹೇಗೆ ಮಾಡಿದಿರಿ ಎಂದು ನಾನು ಕೇಳುವುದು. ಇದಕ್ಕೆ ನೀವು ಆರ್ಥಿಕ ಇಲಾಖೆಯವರ ಪರ್ಮಿಷನ್ ಆದರೂ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಿಂದಲಾದರೂ ಡೈವರ್ಟ್ ಮಾಡಬೇಕು. ಇಲ್ಲಾ ಕೃಷ್ಣಾ ಜಲಭಾಗ್ಯ ನಿಗಮದಿಂದಲಾದರೂ ಡೈವರ್ಟ ಮಾಡಬೇಕು. ಇದು ಒಂದು ಲಕ್ಷ ಎರಡು ಲಕ್ಷ ರೂಪಾಯಿಗಳು ಅಲ್ಲ. 20 ಕೋಟಿ ರೂಪಾಯಿಗಳವರಿಗೆ ನೀವು ಡೈವರ್ಟ್ ಮಾಡಬೇಕಾದರೆ ತಾವು ಯೋಚನೆ ಮಾಡಿ ಎರಡನೆಯದು ಇಷ್ಟೊಂದು ಆರು ತಿಂಗಳಲ್ಲಿ ತರಾತುರಿಯಲ್ಲಿ ಏನು ಕೆಲಸವಾಗಿದೆ, ಇದನ್ನು ನೋಡಿದರೆ ಹಳೆಯ ಬ್ರಿಡ್ಜಸ್ ತೆಗೆದು ಹೊಸ ಬ್ರಿಡ್ಜಸ್ ಹಾಕಿದ್ದಾರೆ. ಅನೇಕ ಕಡೆ ಪಿಚ್ಚಿಂಗ್ ವರ್ಕ್ ಮಾಡಿದ್ದಾರೆ, ಅದು ಕೂಡ ಸಮರ್ಪಕವಾಗಿಲ್ಲ. ಡೀಸಿಲ್ಟ್ ಮಾಡಿದ್ದಾರೆ, ಆರು ತಿಂಗಳಲ್ಲಿ ಮತ್ತೆ ಪುನಃ ಅನೇಕ ಕಡೆ ಮಣ್ಣು ಜಾರಿಕೊಂಡು ಬಂದು ಪುನಃ ಇವತ್ತು ಸಿಲ್ಟಿಂಗ್ ಆಗಿದೆ. ಹೀಗೆ ಈ ಕೆಲಸ ಸುಮಾರು ಎರಡು ಸಾವಿರಕ್ಕಿಂತಲೂ ಹೆಚ್ಚು ಕಂಟ್ರಾಕ್ಟರ್ಸ್ ಕೆಲಸ ಮಾಡಿದ್ದಾರೆ. ಒಬ್ಬರು ಇಬ್ಬರು ಅಲ್ಲ. ಸುಮಾರು 721 ಜನ ಗುತ್ತಿಗೆದಾರರು ಕೆಲಸ ಮಾಡಿದ್ದಾರೆಂದು ಇಲ್ಲೇನೊ ಇವರು ಸಂಖ್ಯೆ ಕೊಟ್ಟಿದ್ದಾರೆ. ಕಾಮಗಾರಿಯನ್ನು ಪೂರ್ಣಗೊಳಿಸಬೇಕಾದರೆ ಇನ್ನು 348 ಗುತ್ತಿಗೆದಾರರುಗಳಿಗೆ ಕೆಲಸ ವಹಿಸಬೇಕಾಗುತ್ತದೆ. ಎಂದು ಹೇಳಿದ್ದಾರೆ. ನಾನು ಸ್ಥಳಕ್ಕೆ ಹೋಗಿ ಭೇಟಿ ನೀಡಿದಾಗ ಪ್ರತಿ ಹಳ್ಳಿಯಲ್ಲಿ ಎರಡು-ಮೂರು ಕಂಟ್ರಾಕ್ಟರ್ಸ್ ಇದ್ದಾರೆ. ವಿಶೇಷವಾಗಿ ಎಂದರೆ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್‌ನಿಂದ ಕೆಲಸ ಕೊಟ್ಟಂತೆ. ಈ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್‌ನವರು ಈ ಗುತ್ತಿಗೆದಾರರಿಗೆ ಕೊಟ್ಟಂತೆ. ಅಂದರೆ ಈ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್ ಕೆಲಸ ಏನು ಎಂದರೆ ಈ ಮಿಡ್ಲ್‌ಮೆನ್ ಇದ್ದಂತೆ. ಕಮೀಷನ್ ಏಜೆಂಟ್ ದಲ್ಲಾಳಿ ಅಂಗಡಿ ಇಟ್ಟುಕೊಂಡಿರುತ್ತಾರಲ್ಲ ಆ ರೀತಿ ಆಗಿದೆ. ರೈತರು ಹೋಗಿ ಮಾಲನ್ನು ಹಾಕಿದರೆ ಅವನು ಮಾರಿಕೊಂಡು ಹೆಚ್ಚಿನ ಹಣವನ್ನು ಸಂಪಾದನೆ ಮಾಡಿ ಕಮೀಷನ್ ತೆಗೆದುಕೊಳ್ಳುತ್ತಾನೆ. ಆ ರೀತಿಯಾಗಿ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್ ಇವರ ಕೆಲಸವನ್ನು ಮಾಡಿದೆ. ನೇರವಾಗಿ ಷಾರ್ಟ್ ಟೆಂಡರ್ ಹಾಕಿ ಇವರು ಕೆಲಸವನ್ನು ಪ್ರಾರಂಭಮಾಡಿಲ್ಲ. ಅದಕ್ಕೆ ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ, ಇದರ ಬಗ್ಗೆ ಸಂಪೂರ್ಣವಾದ ಒಂದು ತನಿಖೆಯಾಗಬೇಕು. ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ಹೇಗೆ ವಹಿಸಿಕೊಟ್ಟರು? ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್‌ನವರು ಮತ್ತೆ ಎರಡು ಸಾವಿರ ಕಂಟ್ರಾಕ್ಟರ್‌ಗಳಿಗೆ ಯಾವ ರೂಪಾದಲ್ಲಿ ಕೊಟ್ಟರು? ಒಂದೊಂದು ಕಂಟ್ರಾಕ್ಟರ್ಸ್ ಪೀಸ್ ವರ್ಕ್ ಎಂದು ಹೇಳಿ ಮುಖಾಮುಖಿಯಾಗಿ ಮೌಖಿಕವಾಗಿ ಸುಮಾರು ಐದು ಲಕ್ಷ, ಆರು ಲಕ್ಷ, ಹತ್ತು ಲಕ್ಷ ರೂಪಾಯಿಗಳ ಕೆಲಸವನ್ನು ಕೊಟ್ಟು ಕಳಪೆ ಕೆಲಸ ಅಲ್ಲಿ ನಡೆದಿದೆ. ಅದಕ್ಕೆ ನಾನು ಒಂದು ಪತ್ರವನ್ನು ಸರ್ಕಾರಕ್ಕೆ ಬರೆದಿದ್ದೇನೆ. ಮುಖ್ಯಮಂತ್ರಿಗಳಿಗೂ ಬರೆದಿದ್ದೇನೆ. ಮತ್ತೆ ಪಬ್ಲಿಕ್ ಅಕೌಂಟ್ ಕಮಿಟಿಗೆ ಬರೆದಿದ್ದೆ. ಅದು ಅಲ್ಲಿ ಬರುವುದಿಲ್ಲ ಎನ್ನುವ ವಾದವನ್ನು ನಮ್ಮ ಮುಂದೆ ಹೇಳಿದ್ದಾರೆ. ಅದಕ್ಕೆ

ದಯವಿಟ್ಟು ಈ ವಿಚಾರವನ್ನು ತಾವು ಲೋಕಾಯುಕ್ತಕ್ಕೆ ವಹಿಸಿಕೊಡಿ. ಏಕೆಂದರೆ ಇದನ್ನು ನಾನು ಬಹಳ ಜವಾಬ್ದಾರಿಯಿಂದ ಈ ಒಂದು ಅಲಿಗೇಷನನ್ನು ಮಾಡುತ್ತಿದ್ದೇನೆ. ಬೇಕಾದರೆ ತಾವು ಅಫಿಡವಿಟ್ ಕೊಡು ಎಂದರೆ ಕೂಡ ಕೊಡುತ್ತೇನೆ. ಏಕೆಂದರೆ 40-50-60 ಕೋಟಿ ರೂಪಾಯಿಗಳನ್ನು ಆರೇ ತಿಂಗಳಲ್ಲಿ ನೀವು ತರಾತುರಿಯಲ್ಲಿ ಖರ್ಚುಮಾಡಿದ್ದೀರಿ. ಕ್ವಾಲಿಟಿ ವರ್ಕ ಆದರೂ ಮೇಂಟ್ಯೆನ್ ಮಾಡಿದ್ದರೆ ಪರವಾಗಿಲ್ಲ. ಕನ್ಸ್ಟ್ರಕ್ಷನ್ ಕಾರ್ಪೋರೇಷನ್‌ನ್ನು ಒಂದು ಏಜೆಂಟ್ ಆಗಿ ಇಟ್ಟುಕೊಂಡು ಆ ಏಜೆಂಟ್‌ನ ಮುಖಾಂತರ ಆವನಿಗೂ ಹತ್ತು ಪರ್‌ಸೆಂಟ್, ಪುನಃ ಸಬ್ ಕಂಟ್ರಾಕ್ಟ್ ಕೊಡುವುದು. ಅವರುಗಳಿಗೆ ಪುನಃ 10-15 ಪರ್‌ಸೆಂಟ್. ಹೀಗದರೆ ಯಾವ ಕೆಲಸ ಒಳ್ಳೆಯದು ಆಗುತ್ತದೆ? ನಾನು ಸುಮಾರು 20-22 ವರ್ಕ್ ನೋಡಿಕೊಂಡು ಬಂದಿದ್ದೇನೆ. ದಯವಿಟ್ಟು ಇದನ್ನು ನಾನು ಮಂತ್ರಿಗಳಿಗೆ ಕೇಳುತ್ತೇನೆ, ತಾವು ಇದರಲ್ಲಿ ಏನೂ ಲೋಪ ಇಲ್ಲ ಎಂದು ಹೇಳಿ ತಮಗೆ ಗೊತ್ತಿದೆಯಲ್ಲ, ನಿಷ್ಪಕ್ಷಪಾತವಿದ್ದರೆ ತಾವು ನೇರವಾಗಿ ಲೋಕಾಯುಕ್ತಕ್ಕೆ ಇದನ್ನು ರೆಫರ್ ಮಾಡಿ. ಎಷ್ಟು ಹಣ ಇದರಲ್ಲಿ ಪೋಲು ಆಗಿದೆ. ಎಷ್ಟು ಒಳ್ಳೆಯ ಕೆಲಸವಾಗಿದೆ, ಎಂಬುದು ಗೊತ್ತಾಗುತ್ತದೆ. ನೀವು ಈಗಾಗಲೇ ಹೇಳಿದಂತೆ390 ಕಿಲೋಮೀಟರ್‌ನಲ್ಲಿ ಎಷ್ಟು ಕೆಲಸವಾಗಿದೆ ಎನ್ನುವುದು ಸಂಪೂರ್ಣವಾಗಿ ಹೊರಗೆಬರಲಿ.

ಅಧ್ಯಕ್ಷರು : ಇದು ಪ್ರಶ್ನೋತ್ತರ ವೇಳೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ವಾಮಿ, ಇದು 60 ಕೋಟಿ ರೂಪಾಯಿಗಳ ಕೆಲಸ. ರಿವೈಸ್ಡ್ ಎಸ್ಟಿಮೇಟ್ 245 ಕೋಟಿ ರೂಪಾಯಿಗಳು.

MR. SPEAKER : I am not against the discussion. ಇದು ಪ್ರಶ್ನೋತ್ತರವೇಳೆ ಅಲ್ಲವೇ ಎಂದು ನಾನು ಹೇಳುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಲೋಕಾಯುಕ್ತಕ್ಕೆ ರೆಫರ್ ಮಾಡುತ್ತೇನೆ ಎಂದು ಹೇಳಿದರೆ ನಾನೇನೂ ಕೇಳುವುದಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : 1979 ಕೆಲಸಗಳು ಟೆಂಡರು ಮುಖಾಂತರ ಆಗಿವೆ. ಈಗ ಕೆ.ಆರ್.ಎಸ್. ಡ್ಯಾಂ ಹತ್ತಿರ ಒಂದು ಜಾಗ ಸುಮಾರು 20 ಮೀಟರ್‌ನಷ್ಟು ನೀರಿನಲ್ಲಿ ಮುಳುಗಿಹೋಗಿತ್ತು. ಆ ಕೆಲಸ 30-40 ದಿವಸಗಳು ಮಾಡಬೇಕಾಗಿತ್ತು ಆದರೆ ಕೆಲಸ ಆಗಿರಲಿಲ್ಲ. ಅಂಥದ್ದು 2275 ಕೇಸಸ್ ಮಾತ್ರ ಕೊಟ್ಟಿರತಕ್ಕಂಥದ್ದು. ಪೀಸ್ ವರ್ಕ್ ಎಂದು ಏನು ಹೇಳುತ್ತೇವೆ ಅದು ಒಂದು ಲಕ್ಷರೂಪಾಯಿ ಒಳಗೆ. ಆಗುವಂತಹ ಕೆಲಸಗಳು. ಅಲ್ಲಿ ತೂಬು ಇದೆ. ಅದನ್ನು ಮಾನ್ಯ ಖರ್ಗೆಯವರೂ ನೋಡಿಕೊಂಡು ಬಂದಿದ್ದಾರೆ. ಬಹುಶಃ ಇಷ್ಟು ಉತ್ತಮವಾದ ಕೆಲಸ ಬೇರೆ ಪ್ರಾಜೆಕ್ಟ್‌ನಲ್ಲಿ ಆಗಿದೆ ಎಂದು ಅವರು ಮನಸಾಕ್ಷಿಯಾಗಿ ಹೇಳಿದರೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಅಷ್ಟು ಚೆನ್ನಾಗಿ ಕೆಲಸ ಆಗಿದೆ. ಶ್ರೀ ನಂಜೇಗೌಡರು, ಯಡಿಯೂರಪ್ಪನವರೂ ಪುಟ್ಟಣ್ಣಯ್ಯನವರು ಎಲ್ಲರೂ ಹೋಗಿ ನೋಡಿದ್ದಾರೆ ಆಗ ಎಸ್. ಪ್ರಕಾಶ್‌ರವರೂ ಕೂಡ ಬಂದಿದ್ದರು. ಅಲ್ಲಿ ಎಷ್ಟು ಚೆನ್ನಾಗಿ ಕೆಲಸವಾಗಿದೆ ಎನ್ನುವುದಕ್ಕೆ ಯಾವ ಮುಚ್ಚುಮರೆಯೂ ಇಲ್ಲ. ಆದರೆ ಒಂದು ವಿಚಾರ ಎನೆಂದರೆ ಪೀಸ್ ವರ್ಕ್ ಯಾವುದು ಇದೆ ಎಂದರೆ ಅಲ್ಲಿ ತೂಬು ಇದ್ದು ಸುಮಾರು 30 ಸಾವಿರ, 40 ಸಾವಿರ, 50 ಸಾವಿರ

ರೂಪಾಯಿಗಳ ಕೆಲಸ ಮಾಡಬೇಕಾಗಿದೆ. 3,408 ಕ್ಕಿಂತ ಹೆಚ್ಚು ವರ್ಕ್ ಇದ್ದು ಅದಕ್ಕೆ ನಮಗೆ 50 ಸಾವಿರ ರೂಪಾಯಿಗಳ ಅಗತ್ಯವಿದೆ ಕಾನೂನು ಪ್ರಕಾರ ಒಂದು ಲಕ್ಷಕ್ಕಿಂತ ಕಡಿಮೆಗೆ ನಾವು ಯಾವುದೆ ಕೆಲಸವನ್ನೂ ಕೊಟ್ಟಿಲ್ಲ. ಟೆಂಡರು ಕೊಟ್ಟಿದ್ದೇವೆ ನಿಜ, ಆದರೆ ಅವರು ಹೇಳುವ ರೀತಿಯಲ್ಲಿ ನಾವು ಬೇರೆ ಪ್ರಾಜೆಕ್ಟ್‌ನಿಂದ ಯಾವ ಹಣವನ್ನೂ ತೆಗೆದುಕೊಂಡಿಲ್ಲ. ನಾವು ಅಡಿಷನಲ್ ಆಗಿ ಫೈನಾನ್ಸ್ ಮಿನಿಸ್ಟರ್‌ರವರನ್ನು ಕೇಳಿ ಅಪ್ರೋಪ್ರಿಯೇಟ್ ಮಾಡಿಕೊಂಡು ಅಡಿಷನಲ್ ಅಮೌಂಟ್ ತೆಗೆದುಕೊಳ್ಳುತ್ತೇವೆ. ಆದರೂ ಸಹ ಅವರು ಇದನ್ನು ಲೋಕಾಯುಕ್ತಕ್ಕೆ ವಹಿಸಬೇಕೆಂದು ಒಂದು ಮಾತನ್ನು ಹೇಳಿದರು. ಅವರು ಆ ಬಗ್ಗೆ ಈ ರೀತಿ ಏತಕ್ಕೆ ಹೇಳುತ್ತಿದ್ದಾರೆ ಎಂದು ನನಗೆ ಗೊತ್ತು. ನಾವು ಈ ವಿಚಾರದಲ್ಲಿ ಟ್ರಾನ್ಸ್‌ಪರೆಂಟ್ ಆಗಿರಬೇಕು. ನನಗೆ ಈ ವಿಷಯದಲ್ಲಿ ಟ್ರಾನ್ಸ್‌ಪರೆಂಟ್ ಆಗಿರಬೇಕೆಂಬ ಅಪೇಕ್ಷೆಯಿದೆ. ಒಂದು ಹೈಪವರ್ ಕಮಿಟಿ ಮಾಡಬೇಕು ಎಂದು ಅವರು ಹೇಳಿದರು. ಹೈಪವರ್ ಕಮಿಟಿ ಮಾಡಿದ್ದೇವೆ. 5 ಜನ ಚೀಫ್ ಇಂಜಿನಿಯರ್‌ಗಳು ಮತ್ತು ಇಬ್ಬರು ಫೈನಾನ್ಸ್ ಕಮೀಷನರ್ ಸೇರಿ ಒಟ್ಟು 7 ಜನರ ಕಮಿಟಿಯಲ್ಲಿ ಅವರು ಏನೇನು ಅಪ್ ಟು ಡೇಟ್ ಇನ್‌ಫರ್ಮೇಷನ್ ಕೊಡುತ್ತಾರೆ ಅದನ್ನು ಆ ಕಮಿಟಿಗೆ ರೆಫರ್ ಮಾಡುತ್ತೇವೆ. ಆ ಕಮಿಟಿ ಎಲ್ಲವನ್ನೂ ಎನ್‌ಕ್ವೈರಿ ಮಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೈಪವರ್ ಕಮಿಟಿ ಎಂದರೆ ಅದು ನಿಮ್ಮ ಕಮಿಟಿ. ಏಕೆಂದರೆ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೂರೇಷನ್‌ನಲ್ಲಿರತಕ್ಕಂಥ ಚೀಫ್ ಎಂಜಿನಿಯರ್‌ಗಳಾಗಲಿ ಅವರೂ ಕೂಡ ನಿಮ್ಮ ಸೆಕ್ರೆಟರಿಯವರಿಗೆ ಸಮಾನರು. ಅವರನ್ನೇ ಸೇರಿಸಿ ಮತ್ತೆ ಕಮಿಟಿ ಮಾಡಿದರೆ ಏನಾಗುತ್ತದೆ ಎಂದರೆ ಅಕ್ಯೂಸಡ್ ಜಡ್ಜ್ ಮಾಡಿದ ಹಾಗೆ ಆಗುತ್ತದೆ. ಅಕ್ಯೂಸಡ್ ಜಡ್ಜ್ ಮಾಡುವುದು ಬೇಡ.

ಶ್ರೀ ಎಂ.ಸಿ. ನಾಣಯ್ಯ : ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್ ಯಾವ ವೈಯಕ್ತಿಕ ಕಂಟ್ರಾಕ್ಟರ್ ಕಟ್ಟಿದ ಸಂಸ್ಥೆ ಅಲ್ಲ. ಅದು ಸರ್ಕಾರದ ಒಂದು ಸಂಸ್ಥೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ರೆಫರ್ ಮಾಡಿ ಎಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಶ್ರೀ ಎಸ್. ಕೃಷ್ಣಪ್ಪ : ವಿರೋಧಪಕ್ಷದ ನಾಯಕರಲ್ಲಿ ಕೇಳಿಕೊಳ್ಳುವುದೇನೆಂದರೆ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಯಾರ ಸ್ವಂತ ಸ್ವತ್ತಲ್ಲ. ಅದು ಸರ್ಕಾರದ ಸ್ವಾಮ್ಯ ಸಂಸ್ಥೆ. ಆ ಸಂಸ್ಥೆಗೆ ಕೊಡುವಂಥ ಅಥವಾ ವಹಿಸಿದಂಥ ಕೆಲಸಗಳು ಕೇವಲ 200ಕ್ಕಿಂತ ಸ್ವಲ್ಪ ಹೆಚ್ಚು ಅಂದರೆ ಸುಮಾರು 10 ಕೋಟಿ ರೂಪಾಯಿಗಳ ಕೆಲಸ ವಹಿಸಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಇದನ್ನು ಕಮಿಟಿಗೆ ರೆಫರ್ ಮಾಡಿ.

ಶ್ರೀ ಎಂ.ಸಿ. ನಾಣಯ್ಯ : ಆಪಾದನೆ ಮಾಡುವಾಗ ಅದಕ್ಕೆ ತಕ್ಕಂತೆ ಹೇಳಬೇಕಲ್ಲವೆ. ಅವರು ಹುರುಳಿಲ್ಲದ ಆಪಾದನೆ ಮಾಡುವಾಗ ನಾವೂ ಹೇಳಬೇಕಾಗುತ್ತದೆ. ಅವರೇನು ವಿರುದ್ಧವಾದಂಥ ಏಜೆನ್ಸಿಗಳನ್ನು ತೆಗೆದುಕೊಂಡ ಕೆಲಸ ಮಾಡಿದ್ದಾರೆಯೇ?

ಶ್ರೀ ಎಸ್. ಕೃಷ್ಣಪ್ಪ : ದಯಮಾಡಿ ಕೇಳಿ, ಅವರು ಬೇಗನೆ ಕೆಲಸ ಮುಗಿಸಬೇಕೆಂದು ಈ ಏಜೆನ್ಸಿಗಳನ್ನು ತೆಗೆದುಕೊಂಡು ಕೆಲಸ ಕೊಟ್ಟಿದ್ದಾರೆಯೇ ವಿನಃ ಬೇರೇನೂ ಇಲ್ಲ.

ಶ್ರೀ ಎಂ.ಸಿ. ನಾಣಯ್ಯ : ವಿರೋಧ ಪಕ್ಷದ ನಾಯಕರು ವಿಶ್ವೇಶ್ವರಯ್ಯ ನಾಲೆ ಹತ್ತಿರ ಹೋಗಿ ಸುಮಾರು 20-22 ಗಂಟೆಗಳ ಕಾಲವನ್ನು ಕಳೆದಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ. ಬಹುಶಃ ಅವರು 22 ಗಂಟೆಗಳ ಕಾಲ ಸುತ್ತಾಡಿ ಅಡ್ಡಾಡಿ ಬಂದಮೇಲೆ ಅವರ ಮನಸ್ಸಿನಲ್ಲಿ ಏನೋ ಸಂಶಯ ಬಂದಿದೆ. ಇದರಲ್ಲಿ ಏನೋ ಅವ್ಯವಹಾರ ನಡೆದಿದೆ, ದುರುಪಯೋಗ ನಡೆದಿದೆ ಎಂಬುದು ಅವರ ಮನಸ್ಸಿಗೆ ಸಾಬೀತಾಗಿದೆ. ಅವರು ನಾನೇ ಬೇಕಾದರೆ ಅಫಿಡವಿಟ್ ಫೈಲ್ ಮಾಡುತ್ತೇನೆ ಎಂದು ಹೇಳುತ್ತಿದ್ದಾರೆ. Sir, Lokayuktha Act, empowers any person to file an affidavit before the Lokayuktha. Lokayuktha he will immediately allow the Leader of Oppostion to file the affidavit before the Lokayuktha. Let him do it. We don't refer on our own. We will not do that.

SRI. M. MALLIKARJUNA KHARGE : The entire House should take note. You refer it. I will also join. If you are fair.

(INTERRUPTION)

SRI. M.C. NANAIAH : According to him something else has taken place. You file an affidavit.

SRI M. MALLIKARJUNA KHARGE : You refer it to Lokayuktha.

SRI. M.C. NANAIAH : You file an affidavit. Lokayuktha will initiate the proceedigs. As far as Government is concerned, we will not do that. Let him do that.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ರೆಫರ್ ಮಾಡಿ ಆನಂತರ ನಾನು ಅಲ್ಲಿ ಏನು ಹೇಳಬೇಕೋ ಅದನ್ನು ನಾನು ಹೇಳುತ್ತೇನೆ.

ಶ್ರೀ ಜಿ.ಟಿ. ಶಿವಕುಮಾರ್ : ಹಿರಿಯ ನಾಯಕರೂ, ಅನುಭವಿಗಳೂ ಆದ ಅವರು ಐದಾರು ತಿಂಗಳಲ್ಲಿ 50 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅಲ್ಲಿ ಆಗಿರುವಂಥ ಕೆಲಸವನ್ನು ನೋಡಿ ಅವರಿಗೆ ಸಹಿಸುವುದಕ್ಕೆ ಆಗಿಲ್ಲ.

(ಗೊಂದಲ)

ಅಧ್ಯಕ್ಷರು : ಯಾವುದೇ ವಿಷಯದಲ್ಲಿ ನಿಮಗೆ ಎಷ್ಟೇ ಉತ್ಸಾಹವಿದ್ದರೂ ಕೂಡ ಒಂದೇ ಸಲ ಮೂರು ನಾಲು ಜನ ಎದ್ದು ನಿಂತು ನಿಮ್ಮಷ್ಟಕೆ ನೀವು ಹೇಳಿದರೆ ನಿಮಗೆ ಗಂಟಲು ನೋವಾಗುತ್ತದೆಯೇ

ಹೊರತು ಯಾರಿಗೂ ಏನೂ ಕೇಳುವುದಿಲ್ಲ. ನಾಗೇಗೌಡರು ತಮ್ಮನ್ನು ತಾವು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಅವರಿಗೆ ಶಕ್ತಿ ಇದೆ. ನಿಮ್ಮಗಳ ರಕ್ಷಣೆ ಅವರಿಗೆ ಬೇಕಾಗಿಲ್ಲ.

ಶ್ರೀ ಜಿ.ಬಿ. ಶಿವಕುಮಾರ್ : ಇಷ್ಟು ಕಿಲೋಮೀಟರ್‌ವರೆಗೆ ಸೋಮಶೇಖರ್‌ರವರದ್ದು, ಇನ್ನಷ್ಟು ಕಿಲೋಮೀಟರ್ ಉದ್ದ ಬನ್ನೂರು ಕೃಷ್ಣಪ್ಪನವರದ್ದು. ಈಗ ಕೇವಲ ಸುಮಾರು 18-19 ಕಿಲೊ ಮೀಟರ್‌ಗೆ 80 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ನಾವು ಐದು ತಿಂಗಳಲ್ಲಿ 55-56 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಇವೊತ್ತು ಚೆನ್ನಾಗಿ ಕೆಲಸ ಆಗಿದೆ ಎಂಬುದನ್ನು ಅಲ್ಲಿನ ಜನರು ಹೇಳುತ್ತಾರೆ. ನಮ್ಮ ಜಿಲ್ಲೆಯ ರಾಜಕೀಯ ಗೊತ್ತಲ್ಲ, ನಮ್ಮ ಮೇಲೆ ಏನಾದರೂ ಹೇಳದಿದ್ದರೆ ಅವರಿಗೆ ನಿದ್ರೆ ಬರುವುದಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ನಾನು ಒಂದು ಪಾಯಿಂಟ್ ಹೇಳುತ್ತೇನೆ. 1989 ರಿಂದ ಇಲ್ಲಿಯವರೆಗೆ 90 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಖರ್ಚಾಗಿದೆ. ಅಲ್ಲಿ ಏನು ಕೆಲಸವಾಗಿದೆ ಎಂಬುದನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಆದರೆ ಆ ಕ್ಲೋಸರ್ ಪೀರಿಯಡ್‌ನಲ್ಲಿ ಆದಂಥ ಕೆಲಸ ಕರ್ನಾಟಕ ರಾಜ್ಯದ ನೀರಾವರಿ ಚರಿತ್ರೆಯೊಳಗೆ ಒಂದು ಇತಿಹಾಸವಾಗಿದೆ. ಇಲ್ಲಿಯವರೆಗೆ ಯಾರೂ ಸಹ ಅಲ್ಲಿನ ಜನರನ್ನು ಒಪ್ಪಿಸಿಕೊಂಡು, ರೈತರನ್ನು ಒಪ್ಪಿಸಿಕೊಂಡು ಈ ರೀತಿ ಕೆಲಸ ಮಾಡಿರಲಿಲ್ಲ. ಜನ ಬೊಬ್ಬಿ ಎದ್ದಿದ್ದರು. ನಾನು ಮಂಡ್ಯ ಜಿಲ್ಲೆಯಲ್ಲಿ ಕೆಲಸ ಮಾಡದೇ ಇದ್ದರೆ ಮಂಡ್ಯ ಜಿಲ್ಲೆಯ ಜನ ಬೊಬ್ಬೆ ಏಳುತ್ತಿದ್ದರು. ಮಂಡ್ಯ ಜಿಲ್ಲೆಯ ಜನರು ಬಹಳ ಪ್ರಜ್ಞಾವಂತರು. ಒಳ್ಳೆಯ ಕೆಲಸ ಮಾಡಿ ಸರಿಯಾದ ಅವಧಿಯಲ್ಲಿ ಮುಗಿಸಿ ಕೊಡದೇ ಹೋಗಿದ್ದರೆ ಜನ ಬೊಬ್ಬೆ ಏಳುತ್ತಿದ್ದರು. ನಾನು ಅವರಿಗೆ ಪ್ರಾರಂಭದಿಂದ ಹೇಳಿಕೊಂಡು ಬಂದಿದ್ದೇನೆ. ಈ ಕಾಮಗಾರಿಗಳನ್ನು ಜನ ಕಾಯ್ದುಕೊಳ್ಳಬೇಕು ಎಂದು ನಾನು ಎಲ್ಲ ಪಕ್ಷಗಳಿಗೂ ಮನವಿ ಮಾಡಿಕೊಂಡಿದ್ದೇನೆ. 6 ತಿಂಗಳಲ್ಲಿ ಈ ಕಾಮಗಾರಿಗಳನ್ನು ಮಾಡಬೇಕಾಗಿರುವುದರಿಂದ ಜನರು ಕಾಯ್ದುಕೊಳ್ಳಬೇಕು, ಅದರ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕು, ಇದು ನಿಮ್ಮ ಕೆಲಸ, ನಿಮ್ಮ ಆಸ್ತಿ ಇದನ್ನು ನೋಡಿಕೊಳ್ಳಬೇಕು ಎಂಬ ಮಾತನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಆದುದರಿಂದ ಈಗಲೂ ಸಹ ಅವರು ಆರೋಪ ಮಾಡಿರುವ ಸಂದರ್ಭದಲ್ಲಿ ಲೋಕಾಯುಕ್ತಕ್ಕೆ ವಹಿಸುವ ಅವಶ್ಯಕತೆ ಇಲ್ಲ. ಮಾನ್ಯ ಕಾನೂನು ಮಂತ್ರಿಗಳು ಹೇಳಿದ್ದಾರೆ. 254 ಕೋಟಿ ರೂಪಾಯಿಗಳ ಕೆಲಸ ಅಲ್ಲಿ ಇನ್ನೂ ಆಗಬೇಕಾಗಿದೆ. ಈಗ ಕೇವಲ ಕ್ಲೋಸ್ ಅಪ್ ಪೀರಿಯಡ್ ಮಗಿಸಿದ್ದೇವೆ. ಇನ್ನೂ ಲಿಂಕ್ ಕೆನಾಲ್‌ನಲ್ಲಿ ಸುಮಾರು 3 ಹಂತಗಳ ಕೆಲಸ ಇದೆ. ಆದುದರಿಂದ ಅವರು ಏನೇನು ಅಲಿಗೇಷನ್ ಮಾಡಿದ್ದಾರೆ ಮತ್ತು ಹೈಪವರ್ ಕಮಿಟಿಗೆ ಇದನ್ನು ರೆಫರ್ ಮಾಡುತ್ತೇವೆ ಬುದಾಗಿ ಏನು ಹೇಳಿದ್ದಾರೆ ಅವೆಲ್ಲಕ್ಕೂ ಸಂಪೂರ್ಣವಾಗಿ ಸೂಕ್ತ ಕ್ರಮ ತೆಗೆದುಕೊಳ್ಳೋಣ ಎಂದು ನಾನು ಅವರಿಗೆ ತಿಳಿಸುತ್ತೇನೆ. ಧನ್ಯವಾದಗಳು.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು.

(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಅವರ ಪಕ್ಷದ ಕೆಲವು ಮಂದಿ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಕೆ.ಎನ್. ನಾಗೇಗೌಡ : ಅಧ್ಯಕ್ಷರೆ, ಒಂದು ಮನವಿ ಏನೆಂದರೆ ಮಂಡ್ಯ ಜಿಲ್ಲೆಯಲ್ಲಿ ಇಂಥ ಒಂದು ಕೆಲಸವಾಗಿ ಅವರ ಪಕ್ಷ ಸರ್ವನಾಶವಾಯಿತಲ್ಲಾ ಎನ್ನುವುದೇ ಅವರಿಗೆ ಬಂದಿರುವ ಅಸೂಯೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಈ ದಿನದ 22ನೇ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ ಒಟ್ಟು 68 ಪ್ರಶ್ನೆಗಳ ಪೈಕಿ 56 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ರಾಜ್ಯದಲ್ಲಿ ಅಂತರ್ಜಲದ ಮಟ್ಟ ಕುಸಿತ.

1701 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲೆಲ್ಲಾ ಅಂತರ್ಜಲದ ಮಟ್ಟ ಕುಸಿಯುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ?

ಆ) ಅಂತರ್ಜಲ ಮಟ್ಟವನ್ನು ವೃದ್ಧಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು? ಕಳೆದ ಮೂರು ವರ್ಷಗಳಲ್ಲಿ ಈ ಕ್ರಮಗಳಿಗಾಗಿ ಖರ್ಚು ಮಾಡಲಾಗಿರುವ ಹಣವೆಷ್ಟು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಹೌದು

ಆ) ಅಂತರ್ಜಲ ಮಟ್ಟವು ಕುಸಿಯುತ್ತಿರುವ ತಾಲ್ಲೂಕುಗಳನ್ನು ಗುರುತಿಸಲಾಗಿದ್ದು, ಈ ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟವನ್ನು ಅಭಿವೃದ್ಧಿಪಡಿಸುವ ಸಲುವಾಗಿ ದೂರ ಸಂವೇದನಾ ತಂತ್ರಜ್ಞಾನ ಮಾಹಿತಿಯ ಅಧ್ಯಯನ ಹಾಗೂ ಭೂಭೌತ ಸಮೀಕ್ಷೆಗಳ ನೆರವಿನಿಂದ ಕೃತಕ ಮರುಪೂರೈಕೆ ರಚನೆಗಳ ಸ್ಥಳಗಳನ್ನು ಗುರುತಿಸಲಾಗುತ್ತಿದೆ. ಮಾಹಿತಿಯ ಆಧಾರದ ಮೇಲೆ ಸೂಕ್ತ ಅಂತರ್ಜಲ ಕೃತಕ ಮರುಪೂರೈಕೆ ರಚನೆಗಳಾದ ಚೆಕ್ ಡ್ಯಾಂ, ಗಲ್ಲಿ ಪ್ಲಗ್, ಪರ್‌ಕುಲೇಶನ್ ಪಾಂಡ್ಸ್, ಇನ್‌ಫಿಲ್‌ಟ್ರೇಷನ್ ವೆಲ್ಸ್, ಸಬ್‌ಸರ್‌ಫೇಸ್ ಡೈಕ್ ಮುಂತಾದವುದಗಳನ್ನು ಪ್ರಯೋಗಾತ್ಮಕವಾಗಿ ರಚಿಸಲಾಗುತ್ತಿದೆ.

ಕಳೆದ ಮೂರು ವರ್ಷಗಳಲ್ಲಿ ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳ ನಿರ್ಮಾಣಕ್ಕಾಗಿ ಸುಮಾರು 70.00 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

ವಕ್ಫ್ ವತಿಯಿಂದ ಹಣ ವೆಚ್ಚ ಮಾಡಿರುವ ಕುರಿತು

1702 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?